# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 630(731)

ಸದಸ್ಯರ ಹೆಸರು : ಶ್ರೀ ಅರುಣ್ ಶಹಾಪೂರ ( ಶಿಕ್ಷಕರ ಕ್ಷೇತ್ರದಿಂದ ಚುನಾಯಿಹತರಾದವರು)

ಉತ್ತರಿಸಬೇಕಾದ ದಿನಾಂಕ : 20-12-2021

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 1987 ರಿಂದ 1995ರವರಗಿನ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಆದೇಶವಾಗಿದ್ದು, ಯಾವಾಗ ಆ ಆದೇಶದಂತೆ ಎಲ್ಲಾ, ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲಾಗಿದಯೇ. | ದಿನಾಂಕ:01.06.1987 ರಿಂದ 1994-95ರವರೆಗೆ ಪ್ರಾರಂಭವಾಗಿ ನಿರಂತರವಾಗಿ ನಡೆಯುತ್ತಿರುವ ಕನ್ನಡ ಮಾಧ್ಯಮದ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಇಚ್ಛಿಸಿ, ಆಡಳಿತ ಮಂಡಳಿಗಳು ಸಲ್ಲಿಸುವ ಪ್ರಸ್ತಾವನೆಯನ್ನು ನಿಯಮಾನುಸಾರ ಪರಿಶೀಲಿಸಿ, ಕಾಲಕಾಲಕ್ಕೆ ಅನುದಾನಕ್ಕೆ ಒಳಪಡಿಸಲು ಕ್ರಮ ವಹಿಸಲಾಗಿದೆ. |
| ಆ) | ಈ ಅವಧಿಯಲ್ಲಿ ಪ್ರಾರಂಭಗೊಂಡು ಅನುದಾನಕ್ಕೆ ಒಳಪಡಿಸಲು ಬಾಕಿ ಇರುವ ಶಾಲಾ ಕಾಲೇಜುಗಳನ್ನು ಯಾವ ಕಾರಣಕ್ಕಾಗಿ ತಡೆಹಿಡಿಯಲಾಗಿದೆ, ಮತ್ತು ಯಾವಾಗ ಅನುದಾನಕ್ಕೆ ಒಳಪಡಿಸಲಾಗುವುದು. | 1987 ರಿಂದ 1994-95ನೇ ಸಾಲಿನ ಅವಧಿಯಲ್ಲಿ ಪ್ರಾರಂಭಗೊಂಡು ಅವಿಚ್ಛಿನ್ನವಾಗಿ ನಡೆಯುತ್ತಿದ್ದು, ವೇತನಾನುದಾನವನ್ನು ಕೋರಿ, ಪ್ರಸ್ತುತ ಸರ್ಕಾರದ ಹಂತದಲ್ಲಿ ಬಾಕಿ ಇರುವ 116-ಪ್ರಾಥಮಿಕ ಶಾಲೆ, 32-ಪ್ರೌಢಶಾಲೆಗಳನ್ನು ಮತ್ತು 29-ಪದವಿ ಪೂರ್ವ ಕಾಲೇಜುಗಳು ಸೇರಿದಂತೆ ಒಟ್ಟು 177 ಶಾಲಾ-ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಹಾಗೂ ಈಗಾಗಲೇ ಅನುದಾನಕ್ಕೆ ಒಳಪಡಿಸಿರುವ ಪದವಿ ಪೂರ್ವ ಶಿಕ್ಷಣ ಕಾಲೇಜುಗಳಲ್ಲಿ 120 ವಿದ್ಯಾರ್ಥಿಗಳ ಸಂಖ್ಯಾಬಲ ಇರುವ 178 ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅನುಮೋದಿಸಿ ಹಾಗೂ ಮೇಲ್ಕಂಡ ಸಾಲಿನ ಅವಧಿಯಲ್ಲಿ ಪ್ರಾರಂಭಗೊಂಡಿರುವ ಶಾಲಾ-ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು 2007ರಲ್ಲಿ ಅವಕಾಶ ಕಲ್ಪಿಸಿ ಈಗಾಗಲೇ 11 ವರ್ಷಗಳು ಗತಿಸಿದ್ದರೂ ಸಹ, ಈವರೆವಿಗೆ ಉಳಿದ ಶಾಲೆಗಳ ಪ್ರಸ್ತಾವನೆಗಳು ಬಾರದೇ ಇದ್ದು, ಅವುಗಳನ್ನು ಇನ್ನು ಮುಂದೆ ಪರಿಗಣಿಸಬಾರದೆಂದು ಅಂದಿನ ಮಾನ್ಯ |

| | | |
|---|---|---|
| | | ಮುಖ್ಯಮಂತ್ರಿಯವರು ತಮ್ಮ ಅಧ್ಯಕ್ಷತೆಯಲ್ಲಿ ದಿನಾಂಕ:28.09.2018 ರಂದು ನಡೆದ ಸಭೆಯಲ್ಲಿ ತೀರ್ಮಾನಿಸಿದ್ದು. ಅದರಂತೆ, ಸರ್ಕಾರದ ಪತ್ರ ಸಂಖ್ಯೆ: ಇಡಿ 18 ಎಸ್‌ಇಪಿ 2018, ದಿನಾಂಕ:26.10.2018ರಲ್ಲಿ ಮತ್ತು ಸರ್ಕಾರದ ಪತ್ರ ಸಂಖ್ಯೆ:ಇಡಿ 445 ಪಿಬಿಎಸ್ 2018, ದಿನಾಂಕ:29.06.2020ರಲ್ಲಿ ಮೂರು ಆಯುಕ್ತಾಲಯಗಳಿಗೆ ಸೂಚಿಸಲಾಗಿರುತ್ತದೆ. |
| ಇ) | 1995ರ ನಂತರ ಆರಂಭವಾದ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಇರುವ ಸಮಸ್ಯೆಗಳೇನು; ಯಾವ ಕಾರಣಕ್ಕಾಗಿ ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಯು ನಿಧಾನಗತಿಯಲ್ಲಿ ಸಾಗುತ್ತಿದೆ;ಈ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ಅನುದಾನಕ್ಕೆ ಒಳಪಡಿಸಲಾಗುವುದು? | 1995ರ ನಂತರ ಆರಂಭವಾದ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ ಹಿಂದಿನ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಹಾಲಿ ಸಭಾಪತಿ ರವರ ಸಮ್ಮುಖದಲ್ಲಿ ಏರ್ಪಡಿಸಲಾಗಿದ್ದ ಸಭೆಯಲ್ಲಿ, ಸದರಿ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂಬಂಧ 1995 ರಿಂದ 2019 ರವರೆಗೆ ಪ್ರತಿ 05 ವರ್ಷದ ಬ್ಲಾಕ್ ಅವಧಿಯಲ್ಲಿ ಪ್ರಾರಂಭಿಸಲಾಗಿರುವ ಶಾಲಾ ಕಾಲೇಜುಗಳಲ್ಲಿ ಎಷ್ಟು ಶಿಕ್ಷಕರು / ಉಪನ್ಯಾಸಕರುಗಳು / ಬೋಧಕೇತರುಗಳು ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಇವರುಗಳನ್ನು ಅನುದಾನಕ್ಕೆ ಒಳಪಡಿಸಿದ್ದಲ್ಲಿ ವಾರ್ಷಿಕವಾಗಿ ತಗಲುವ ಅಂದಾಜು ವೆಚ್ಚದ ಮಾಹಿತಿಯನ್ನು ಪಡೆಯಲು ಸೂಚಿಸಿದ್ದು, ಮೂರು ಆಯುಕ್ತಾಲಯಗಳು ಮತ್ತು ಪದವಿ ಪೂರ್ವ ನಿರ್ದೇಶನಾಲಯದಿಂದ ಪಡೆದು ಪರಿಶೀಲಿಸಲಾಗುವುದು. |

**ಇಪಿ 268 ಪಿಎಂಸಿ 2021**

[ಬಿ.ಸಿ.ನಾಗೇಶ್]
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು.